ಬಾರಿಯೂ ಕೂಡಾ ತಮ್ಮ ಗಮನಕ್ಕೆ ತಂದಿದ್ದೇನೆ. ಧಾರವಾಡಕ್ಕೆ special ಆಗಿ ಏನಾದರೂ ಹಾಸ್ಟೆಲ್ ವ್ಯವಸ್ಥೆ ಮಾಡಿ ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ಯುನಿವರ್ಸಿಟಿ ಆವರಣದಲ್ಲಿ ಒಂದು ಬಾಲಕಿಯರ ಮತ್ತು ಬಾಲಕರ ವಿದ್ಯಾರ್ಥಿ ನಿಲಯವನ್ನು ಈಗಾಗಲೇ ಧಾರವಾಡದಲ್ಲಿ ಮಂಜೂರು ಮಾಡಿದ್ದೇವೆ. ಹೆಚ್ಚಿಗೆ ವಿದ್ಯಾರ್ಥಿಗಳಿದ್ದರೆ ಇನ್ನೊಂದು ವಿದ್ಯಾರ್ಥಿ ನಿಲಯವನ್ನು ಕೂಡಾ ನಾವು ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು: ಈಗ ಶಾರದಾ ಮೋಹನ್ ಶೆಟ್ಟಿ ರವರ ಪ್ರಶ್ನೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಹೊರಗುತ್ತಿಗೆ ಶಿಕ್ಷಕರು

2851; ಶ್ರೀಮತಿ ಶಾರದಾ ಮೋಹನ ಶೆಟ್ಟಿ (ಕುಮಟಾ)

ಅ) ಮೊರಾರ್ಜಿ ದೇಸಯಿ ವಸತಿ ಶಾಲೆಯಲ್ಲಿ ಹೊರಗುತ್ತಿಗೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ನ್ಯಾಯಾಲಯದ ಆದೇಶವನ್ನು ಪಾಲಿಸುವ ವಿಷಯ ಸರ್ಕಾರದ ಗಮನಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ)

ಅ) ಹೌದು.

ಆ) ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಮಾನವನ್ನು ಅನುಷ್ಠಾನಗೊಳಿಸಲು ಸಂಘವು ಹೊರಸಂಪನ್ಮೂಲದ ಸಿಬ್ಬಂದಿಗಳ ಮಾಹಿತಿಯು ಜಿಲ್ಲಾ ಮಟ್ಟದ ಅಧಿಕಾರಿಗಳ ಬಳಿ ಲಭ್ಯವಿರುವುದರಿಂದ ಸಂಬಂಧಪಟ್ಟ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಮತ್ತು ಪ್ರಾಂಶುಪಾಲರುಗಳ ಸಮಿತಿಯನ್ನು ರಚಿಸಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸನಿರ್ವಹಿಸು

ತ್ತಿರುವ ಎಲ್ಲಾ ಬೋಧಕ ಸಿಬ್ಬಂದಿಗಳ ವೈಯಕ್ತಿಕ ಮಾಹಿತಿಯನ್ನು ಪಡೆಯಲಾಗಿದೆ. ಹಾಗೂ ಪರಿಶೀಲನೆಗೆ ಒಳಪಡಿಸಿದೆ. ನ್ಯಾಯಾಲಯದ ಆದೇಶಾನುಸಾರ ಅಯ್ಕೆಗೆ ಅರ್ಹರಾದ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲು ಕ್ರಮಕೈಗೊಂಡಿದೆ.

The KREIS constituted District Level committee consisting of Principals of the schools and district level officers of concerned departments with whom the information of outsource teaching staff is available. The KREIS collected information of outsource teachers from the districts and verified the information about eligibility of the outsource teachers. The action is traken to publish provisional list as per orders of the Hon'ble High Court.

ಪ್ರಶ್ನೆ ಸಂಖ್ಯೆ 2851

ಉತ್ತರದ ಪ್ರತಿಯನ್ನು ಲಗತ್ತಿಸಿದೆ

ಶ್ರೀಮತಿ ಶಾರದಾ ಮೋಹನ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ನ್ಯಾಯಾಲಯದ ಆದೇಶವನ್ನು ಪಾಲಿಸುವ ವಿಷಯ ಸರ್ಕಾರದ ಗಮನಕ್ಕೆ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಹೌದು ಎಂದು ಉತ್ತರಿಸಿದ್ದಾರೆ. ಆದರೆ, 2007ರಲ್ಲಿ ಇದ್ದಂತಹ ಶಿಕ್ಷಕರು ಹಾಗೂ ಪ್ರಾಂಶುಪಾಲರನ್ನು ಖಾಯಂ ಮಾಡಬೇಕೆಂದು ನ್ಯಾಯಾಲಯ ಆದೇಶವನ್ನು ಮಾಡಿದೆ. ಇವತ್ತಿನವರೆಗೆ ಯಾರಿಗೂ ಖಾಯಂ ಮಾಡಿಲ್ಲ.

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಡೆಸಲಾಗುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮತ್ತು ಅಟಲ್

ಬಿಹಾರಿ ವಸತಿ ಶಾಲೆಗಳಲ್ಲಿ ಕಳೆದ ಐದಾರು ವರ್ಷಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಖಾಯಂಗೊಳಿಸಬೇಕೆಂದು ಎರಡು ನ್ಯಾಯಾಲಯಗಳು ಆದೇಶ ಮಾಡಿವೆ. ಆ ಆದೇಶದ ಅನುಗುಣವಾಗಿ ನಾವು ಈಗಾಗಲೇ ಒಂದು ಪಟ್ಟಿಯನ್ನು ಸಿದ್ಧ ಮಾಡಿ ಕೋರ್ಟಿಗೆ ಸಲ್ಲಿಸಿದ್ದೇವೆ, ಮತ್ತೊಂದು ಪಟ್ಟಿಯನ್ನು ಕೂಡ ಬಿಡುಗಡೆ ಮಾಡಿದ್ದೇವೆ. ಯಾರ್ಯಾರು ಅರ್ಹರಿದ್ದಾರೆ? ಅವರು ಸೇವೆ ಸಲ್ಲಿಸಿರತಕ್ಕಂತಹದ್ದು ಮತ್ತು ಅವರು ಸಿಇಟಿಯಲ್ಲಿ ಅವರು ಗಳಿಸಿರತಕ್ಕಂತಹ ಅಂಕ ಹಾಗೂ ಒಂದು weightage marks ಕೊಟ್ಟು 322 ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದೇವೆ. ಅದರಲ್ಲಿ ಏನಾದರೂ ಆಕ್ಷೇಪಣೆಯಿದ್ದರೆ ಅವರು ಆಕ್ಷೇಪಣೆ ಸಲ್ಲಿಸಿದರೆ ಅದನ್ನೂ ಕೂಡಾ ಪರಿಗಣಿಸಿ ಶಿಕ್ಷಕರಿಗೆ ನ್ಯಾಯವನ್ನು ಕೊಡಿಸುತ್ತೇವೆ.

ಅಧ್ಯಕ್ಷರು: ಅದೆಲ್ಲಾ ಬೇಡ. ಉತ್ತರ ಪ್ರಶ್ನೆಗಷ್ಟೇ ಸೀಮಿತವಾಗಿರಲಿ.

ಶ್ರೀ ಹೆಚ್. ಆಂಜನೇಯ: ಈಗಾಗಲೇ ಪಟ್ಟಿಯಲ್ಲಿ ಯಾರ್ಯಾರು ಶಿಕ್ಷಕರಿದ್ದಾರೆ, ಅವರನ್ನು ಖಾಯಂಗೊಳಿಸಲು ನಾವು ಕ್ರಮ ಕೈಗೊಂಡಿದ್ದೇವೆ.

ಅಧ್ಯಕ್ಷರು: ಚಿಕ್ಕಮಾದು ರವರೆ ಹೇಳಿ.

ಶ್ರೀಮತಿ ಶಾರದಾ ಮೋಹ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ಇಷ್ಟು ದಿವಸ ಅವರುಗಳು temporary ಯಾಗಿ ಶಿಕ್ಷಕರಾಗಿ ಕೆಲಸ ಮಾಡಲು ವರ್ಷಕ್ಕೆ 5% ಸೇವಾ ಕೃಪಾಂಕ ಕೊಡುವುದಾಗಿ ನ್ಯಾಯಾಲಯ ಹೇಳಿದೆ. ಅದನ್ನೂ ಕೂಡಾ....

ಅಧ್ಯಕ್ಷರು: ನೀವು ಕೇಳಿರುವ ಪ್ರಶ್ನೆ. ನ್ಯಾಯಾಲಯದ ತೀರ್ಮಾನದ ಪ್ರಕಾರ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು. ಅದಕ್ಕೆ ಅವರು ಉತ್ತರ ಹೇಳಿದ್ದಾರೆ.

ಶ್ರೀಮತಿ ಶಾರದಾ ಮೋಹ ಶೆಟ್ಟಿ: ಆ ಶಿಕ್ಷಕರಿಗೆ ಸೇವಾ ಕೃಪಾಂಕ ಕೊಡ ಬೇಕೆಂದು ತಮ್ಮ ಮೂಲಕ ಅವರನ್ನು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು: ಉತ್ತರವಿದ್ದರೆ ಹೇಳಿ.

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, 2011 ರವರೆಗೆ ಅವರು ಎಲ್ಲಿಂದ ಸೇವೆ ಸಲ್ಲಿಸಿದ್ದಾರೆ, ಸಿ.ಇ.ಟಿ. ಯಾವಾಗ ಬರೆದಿದ್ದಾರೆ, ಅದನ್ನು weightage mark ಎಂದು ಪ್ರತಿಯೊಬ್ಬರಿಗೂ 5 ರಂತೆ weightage marks ಕೊಟ್ಟು ಆಯ್ಕೆ ಮಾಡುತ್ತೇವೆ. ಅದರಲ್ಲೂ ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮಾನವೀಯತೆ ದೃಷ್ಟಿಯಿಂದ ಉಳಿದ ಅಭ್ಯರ್ಥಿಗಳನ್ನೂ ಕೂಡಾ ನೋಡುತ್ತೇವೆ.

ಅಧ್ಯಕ್ಷರು: ಅದೆಲ್ಲಾ ಬೇಡ.

ಶ್ರೀ ಹೆಚ್. ಆಂಜನೇಯ: ಅದನ್ನೂ ಕೂಡಾ ಮಾತನಾಡಿ ಅವರಿಗೆ ಏನು ಬೇಕೋ ಆ ಸಹಾಯವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು: ಚಿಕ್ಕಮಾದು ಹೇಳಿ.

ವಸತಿ ವಿದ್ಯಾರ್ಥಿ ನಿಲಯಗಳು

197 (2640); ಶ್ರೀ ಚಿಕ್ಕಮಾದೂ ಎಸ್ (ಹೆಚ್. ಡಿ. ಕೋಟೆ)

ಅ) ರಾಜ್ಯದಲ್ಲಿ ಮೊರಾರ್ಜಿ, ಆಶ್ರಯ ಶಾಲೆ, ಗಿರಿಜನರ ಆಶ್ರಯ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ಶಾಲೆ ಮತ್ತು ಏಕಲವ್ಯ ವಸತಿ ಶಾಲೆಗಳ ಸಂಖ್ಯೆ ಎಷ್ಟು;

ಆ) ಮೇಲ್ಕಂಡ ವಸತಿ ಶಾಲೆಗಳಲ್ಲಿ ಸ್ವಂತ ಕಟ್ಟಡದಲ್ಲಿ ನಡೆಯುತ್ತಿರುವ ಶಾಲೆಗಳೆಷ್ಟು ಮತ್ತು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಶಾಲೆಗಳೆಷ್ಟು;

ಇ) ಮೇಲ್ಕಂಡ ಆಶ್ರಯ ಶಾಲೆಗಳಲ್ಲಿ ಸರ್ಕಾರದಿಂದ ನೇಮಕಗೊಂಡಿರುವ ಉಪನ್ಯಾಸಕರ ಸಂಖ್ಯೆ ಎಷ್ಟು; ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಗೊಂಡಿರುವ ಉಪನ್ಯಾಸಕರ ಸಂಖ್ಯೆ ಎಷ್ಟು ಹಾಗೂ ಅವರಿಗೆ ನೀಡುತ್ತಿ ರುವ ವೇತನ ಅಥವಾ ಗೌರವಧನ ಎಷ್ಟು;